**ಎಮ್.ವಿ.ಸಿ. ನಂಃ 1387/2024**
**ಪಿ .ಡಬ್ಲ್ಯೂಃ 1,**

**ದಿನಾಂಕ : 04-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ ಟಿ.ವಿ.ಪಿ. ಎದುರುದಾರ ಪರ ವಕೀಲರಿಂದ :**

ಅಪಘಾತ ಆದಾಗ ನಾನು ಸ್ಥಳದಲ್ಲಿ ಇದ್ದೆ. ದೂರು ನನ್ನ ಹೆಂಡತಿ ನೀಡಿದ್ದಾಳೆ, ನಾನು ಯಾಕೆ ದೂರು ಕೊಟ್ಟಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ಅಪಘಾತ ಆದ ಸ್ಥಳ ಕ್ರಾಸ ರೋಡ್ --ದೆ ಎಂದರೆ ಸರಿಯಲ್ಲ. ಸದರಿ ಅಪಘಾತ ಸ್ಥಳ ಒಂದು ಹುಮನಾಬಾದ ಹೋಗುವ ರಸ್ತೆ, ಕಲಬುರಗಿಗೆ ಹೋಗುವ ರಸ್ತೆ ಮತ್ತು ಮುತ್ಸಂಗಿ ಹೋಗುವ ರಸ್ತೆ ಇದೆ ಎಂದರೆ ಸರಿ. ಅಪಘಾತ ವಾದ ರಸ್ತೆ ಅಗಲವಾದ ರಸ್ತೆ ಇದೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದಲ್ಲಿ ನನ್ನ ಮಗ ಆಟ ಆಡುತ್ತಿದ್ದ ಆ ಸಮದಯಲ್ಲಿ ಕಾರಿನವನು ಬಂದು ಗುದ್ದಿರುತ್ತಾನೆ. ಸದರಿ ಅಪಘಾತವು ನನ್ನ ಮಗ ಅಭಿಷೇಕ ಇತನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಕಾರ ನಂಬರ ಗೊತ್ತಿಲ್ಲಾ.

ನನ್ನ ಮಗ ದಿ: 29-05-2024 ರಿಂದ 01-06-2024 ರವರೆಗೆ ಮನೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಆ ಸಮಯದಲ್ಲಿ ರೂ. 3,50,000/- ಖರ್ಚು ಆಗಿ, ಇನ್ನು ರೂ. 2,50,000/- ಹಣ ಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸ್ಥಳದಲ್ಲಿ ನಾನು ಇರಲಿಲ್ಲಾ, ಆದ ಕಾರಣ ನನ್ನ ಹೆಂಡತಿ ದೂರು ನೀಡಿದ್ದಾಳೆ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ಬಿಲ್ಲುಗಳು ಪರಿಹಾರ ಪಡೆಯಲು ಖೊಟ್ಟಿಯಾಗಿ ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಬಿಲ್ಲುಗಳಲ್ಲಿ ಮುಂಗಡವಾಗಿ ಪಾವತಿಸಿದ ಹಣವನ್ನು

**ಎಮ್.ವಿ.ಸಿ. ನಂಃ 1387/2024**
**ಪಿ .ಡಬ್ಲ್ಯೂಃ 1,**

ಸೇರಿಸಿ ಸುಳ್ಳು ಬಿಲ್ಲಗಳನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಹೆಚ್ಚಿನ ನೂನ್ಯತೆಯನ್ನು ವೈದ್ಯರ ಮೇಲೆ ಪ್ರಭಾವ ಬೀರಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ಅಪಘಾತ ಆದ ಸಮಯದಲ್ಲಿ ಕಾರಿನ ಚಾಲಕನ ಬಳಿ ಚಾಲನಾ ಪತ್ರ ಇರಲಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ನಾನು ಪರಿಹಾರ ಪಡೆಯಲು ವಿಮೆ ಕಂಪನಿ ಮೇಲೆ ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತವು ನನ್ನ ಮಗನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**